1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.151/2023

ದಿಃ 21.12.2024
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-2 Pw-2

| | | |
|---|---|---|
| ಹೆಸರು | ಃ | ಚೆಲುವರಾಜು |
| ತಂದೆಯ ಹೆಸರು | ಃ | ಚಲುವಯ್ಯ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ಖಾಸಗಿ ಕೆಲಸ |
| ವಾಸಸ್ಥಳ | ಃ | ಲಕ್ಕಸಂದ್ರ,<br>ರಾಮನಗರ ತಾಲ್ಲೂಕು |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ಚಾಸಾ.1 ನನ್ನ ತಂದೆ.

2. ನಾವು ಹಿಂದೂ ಆದಿ ಕರ್ನಾಟಕ ಜಾತಿಗೆ ಸೇರಿದವರಾಗಿರುತ್ತೇವೆ.

3. ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಹಿಂದೂ ಮಡಿವಾಳ ಜಾತಿಗೆ ಸೇರಿದವರಾಗಿದ್ದು ನನಗೆ ಗೊತ್ತು.

4. ಆರೋಪಿತರಿಗೆ ನಮ್ಮ ಜಾತಿ ಗೊತ್ತು.

5. ನನಗೆ ಚಾಸಾ.3ರಿಂದ 5 ಗೊತ್ತು.

6. ಈಗ ಸುಮಾರು 30 ವರ್ಷಗಳ ಹಿಂದೆ ನನ್ನ ಅಜ್ಜನಿಗೆ ಸುಗ್ಗನಹಳ್ಳಿ ಗ್ರಾಮದ ಸರ್ವೆ ನಂಬರ್.83 ಜಮೀನನ್ನು ಸರ್ಕಾರದಿಂದ ಮಂಜೂರಾಗಿದ್ದು, ಅದು ನಮ್ಮ ಸ್ವಾಧೀನದಲ್ಲಿದ್ದು, ಆ ವಿಚಾರವಾಗಿ

ದಿಃ15.08.2023 ರಂದು ಸಾಯಂಕಾಲ ಸುಮಾರು 5.00 ಗಂಟೆ ಸಮಯದಲ್ಲಿ ನಾನು, ಮತ್ತು ನನ್ನ ತಂದೆ ಚಾಸಾ.1 ಹಾಗೂ ಚಾಸಾ.3 ನಮ್ಮ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದಾಗ, ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಅಲ್ಲಿಗೆ ಬಂದು ಸದರಿ ಜಮೀನು ತಮ್ಮದು ಎಂದು ಹೇಳಿ ಅದು ನಾವು ಹೇಗೆ ಉಳುಮೆ ಮಾಡುತ್ತಿದ್ದೇವೆ ಎಂದು ಜಗಳ ಕಾಯ್ದು, ಹೊಲೆಯ ಸೂಳೆ ಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಜಾತಿನಿಂದನೆ ಮಾಡಿ ಬೈದಿರುತ್ತಾರೆ.

7. ಆಗ 1 ನೇ ಆರೋಪಿತನು ಕೈಯ್ಯಿಂದ ಚಾಸಾ.1 ಈತನ ಎಡಭುಜಕ್ಕೆ ಮತ್ತು ಕಪಾಳಕ್ಕೆ ಹೊಡೆದಿರುತ್ತಾನೆ.

8. ಆ ಸಮಯದಲ್ಲಿ ಬಿಡಿಸಿಕೊಳ್ಳಲು ಹೋದ ನನಗೆ, ನನ್ನ ಕೈಯ್ಯಲ್ಲಿನ ಮೊಬೈಲನ್ನು ಕಿತ್ತುಕೊಂಡು 1 ನೇ ಆರೋಪಿತನು ನನ್ನ ತಲೆಯ ಮೇಲೆ ಹೊಡೆದಿರುತ್ತಾನೆ.

9. ಆಗ ಸದರಿ ಮೊಬೈಲ್ ಒಡೆದಿರುತ್ತದೆ.

10. 2 ನೇ ಆರೋಪಿತನು ಚಾಸಾ.1 ಈತನಿಗೆ ನೆಲದ ಮೇಲೆ ತಳ್ಳಿ ಕಾಲಿನಿಂದ ತುಳಿದಿರುತ್ತಾನೆ.

11. ಇನ್ನೊಮ್ಮೆ ಸದರಿ ತಮ್ಮ ಜಮೀನಿನ ಹತ್ತಿರ ನಾವು ಹೋದಲ್ಲಿ ನಮಗೆ ಕೊಲೆ ಮಾಡುವುದಾಗಿ ಆರೋಪಿತರು ಪ್ರಾಣದ ಬೆದರಿಕೆ ಹಾಕಿರುತ್ತಾರೆ.

12. ನಂತರ ನನಗೆ ಚಾಸಾ.1 ಈತನು ರಾಮನಗರದ ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿರುತ್ತಾನೆ.

12. ಸದರಿ ಮೊಬೈಲ್‌ನ್ನು ಆರೋಪಿತರು ಒಡೆದಿರುವುದರಿಂದ ಸುಮಾರು 20 ಸಾವಿರ ರೂಪಾಯಿಯಷ್ಟು ನಷ್ಟವಾಗಿರುತ್ತದೆ.

13. ತದಂತರ ದಿಃ17.08.2023 ರಂದು ನನ್ನ ತೋರಿಕೆಯ ಮೇರೆಗೆ ಪೊಲೀಸರು ಬೆಳಿಗ್ಗೆ 10.00 ರಿಂದ 11.00 ಗಂಟೆಯವರೆಗೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಒಂದು ಸ್ಥಳ ಪಂಚನಾಮೆಯನ್ನು ಮಾಡಿ ಅದರ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ.

14. ಸದರಿ ಸ್ಥಳ ಪಂಚನಾಮೆಯನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಅದನ್ನು ನಿ.ಪಿ.2 ಎಂದು, ಮತ್ತು ಅದರ ಮೇಲಿರುವ ನನ್ನ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು.

15. ಆ ಸಮಯದಲ್ಲಿ ಚಾಸಾ.4 ಮತ್ತು 6 ಸಹ ಸ್ಥಳದಲ್ಲಿ ಹಾಜರಿದ್ದರು.

16. ಅದೇ ಸಮಯದಲ್ಲಿ ಪೊಲೀಸರು ಸದರಿ ನನ್ನ ಒಡೆದ ಮೊಬೈಲ್‌ನ್ನು ತಮ್ಮ ವಶಕ್ಕೆ ಪಡೆದು, ಸ್ಥಳದಲ್ಲಿ 4 ವರ್ಣರಂಜಿತ ಛಾಯಾಚಿತ್ರಗಳನ್ನೂ ಸಹ ತೆಗೆಸಿರುತ್ತಾರೆ.

17. ಸದರಿ 4 ವರ್ಣರಂಜಿತ ಛಾಯಾಚಿತ್ರಗಳನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಅವುಗಳನ್ನು ಕ್ರಮವಾಗಿ ನಿ.ಪಿ.3ರಿಂದ 6 ಎಂದು ಗುರುತಿಸಲಾಯಿತು.

18. ಸದರಿ ನನ್ನ ಒಡೆದ ಮೊಬೈಲ್‌ನ್ನು ಈಗ ನೋಡಿ ಗುರುತಿಸುತ್ತಿದ್ದು, ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಿದ್ದು ಇರುತ್ತದೆ.

<u>ಪಾಟೀ ಸವಾಲುಃ ಶ್ರೀ. ಎಸ್.ಎಲ್., ವಕೀಲರಿಂದ ಆರೋಪಿಗಳ ಪರವಾಗಿಃ ಆರೋಪಿ ಪರ ವಕೀಲರು ಕೂಗಿಸಲಾಯಿತು. ಗೈರು ಹಾಜರಿರುತ್ತಾರೆ. ಶ್ರೀ. ಹೆಚ್.ಸಿ.ಎನ್., ವಕೀಲರು ಸಮಯಾವಕಾಶ ಕೇಳಿರುತ್ತಾರೆ, ನ್ಯಾಯತಾದೃಷ್ಟಿಯಿಂದ ಪ್ರಸ್ತುತ ಸಾಕ್ಷಿಗೆ 500/- ರೂಪಾಯಿ ಸಾಕ್ಷಿ ಭತ್ಯೆ ನೀಡುವ ಕರಾರಿನ ಮೇರೆಗೆ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಗಿರುತ್ತದೆ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.